ದಿನಾಂಕ: 07.11.2020

# ವಾರ್ಡ್ ಸಮಿತಿ ಸಭಾ ನಡವಳಿಗಳು, ವಾರ್ಡ್ ನಂ-54 ಹೂಡಿ

ದಿನಾಂಕ: 07.11.2020 ರಂದು ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶದಂತೆ ವಾರ್ಡ್ ಸಂಖ್ಯೆ: 54 ಹೂಡಿ ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ 54 ರ ವಾರ್ಡ್ ಕಾಮಗಾರಿ ಕಛೇರಿಯಲ್ಲಿ ಏರ್ಪಡಿಸಲಾಗಿದ್ದು ವಾರ್ಡ್‌ನ ಆರ್.ಡಬ್ಲ್ಯೂ.ಎ. ಹಾಗೂ ಸಾರ್ವಜನಿಕರೊಂದಿಗೆ ಕುಂದು ಕೊರತೆಗಳನ್ನು ಚರ್ಚಿಸಲು ನೊಡಲ್ ಅಧಿಕಾರಿಗಳು ಸೂಚಿಸಿರುವಂತೆ.

ಸಭೆಯನ್ನು ವಾರ್ಡ್ ನೋಡಲ್ ಅಧಿಕಾರಿಗಳಾದ ಡಾ//ಕಲ್ಪನಾ ಮೇಡಂ ರವರು ಸಭೆಗೆ ಆಗಮಿಸಿರುವ ಅಧಿಕಾರಿ ನೌಕರರನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಸಭೆ ಆರಂಭಿಸಲು ಸೂಚಿಸಿರುತ್ತಾರೆ.

**ಹಾಜರಿದ್ದ ಅಧಿಕಾರಿ ನೌಕರರು ಮತ್ತು ಆರ್.ಡಬ್ಲ್ಯೂ.ಎ.**

1. ಶ್ರೀಮತಿ. ಡಾ// ಕಲ್ಪನಾ . ನೋಡಲ್ ಅಧಿಕಾರಿ.
2. ಶ್ರೀ. ರಂಗನಾಥ್.ಆರ್. AEE Hoodi
3. ಶ್ರೀ. ಶೇಖ್ ಮೊಹಿಯುದ್ದಿನ್ AE Hoodi
4. ಶ್ರೀ. ನಾಗರಾಜ.ಪಿ SHI Hoodi
5. ಶ್ರೀ. ಸುದೀಪ್. RI Hoodi
6. ಶ್ರೀ. ಸಂಪಂಗಿ ರಾಮಯ್ಯ. JE Bescom.
7. ಶ್ರೀ. ವೀರಪ್ಪ. JHI Hoodi
8. ನವೀನ್. AE. BWSSB
9. ಶ್ರೀ. ಸುರೇಶ್ ಬಾಬು. Marshal
10. ಶ್ರೀ. ಬಾಲರಾಜು. RWA. Belathru
11. ಶ್ರೀ. ಆರೋಗ್ಯ ಸ್ವಾಮಿ. RWA Byirathi
12. ಶ್ರೀ. ಸತೀಶ್. RWA, Ayyappanagar
13. ಶ್ರೀ. ಮಂಜುನಾಥ.ವಿ. RWA, Ayyappanagar
14. ಶ್ರೀ. ತಿಮ್ಮರಾಯಪ್ಪ. Sup . SWM
15. ಶ್ರೀ. ಹರೀಶ್. Sup . SWM
16. ಶ್ರೀ. ನಾಗರಾಜ. Sup . SWM
17. ಶ್ರೀ. ಈರಪ್ಪ. Sup . SWM

**ನೋಡಲ್ ಅಧಿಕಾರಿಗಳು ಹಾಜರಿರುವ ಅಧಿಕಾರಿ ನೌಕರರನ್ನು ಸ್ವಾಗತಿಸಿ.**

ಆರ್.ಡಬ್ಲ್ಯೂ.ಎ.ಗಳಾದ ಬಾಲರಾಜು ರವರು ಎಚ್‌ಡಿಎಫ್‌ಸಿ ಹಿಂಭಾಗದ ರಸ್ತೆಯಲ್ಲಿ ಹೊಸ ಚರಂಡಿ ಹಾಗೂ ಕಲ್‌ವರ್ಟ್ ಮಾಡಿಸಲು ಅಧ್ಯಕ್ಷರಿಗೆ ಕೋರಿರುತ್ತಾರೆ ಇದರ ಬಗ್ಗೆ ಸಭೆಯನ್ನು ಚರ್ಚಿಸಲಾಗಿ ವಾರ್ಡ್ ಅಭಿಯಂತರರಿಗೆ ಇದರ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಆರ್.ಡಬ್ಲ್ಯೂ.ಎ. ಮಂಜುನಾಥ್ ರವರು ಅಯ್ಯಪ್ಪನಗರ 2ನದ ಬ್ಲಾಕ್ ವಿನಾಯಕ ಬಡಾವಣೆ. ಓಂ ಶಕ್ತಿ ಬಡಾವಣೆ ಮತ್ತು ಆಕ್ಸೀಮ್ಮಮ್ ಗಾರ್ಡನ್ 10 ದಿನಕ್ಕೊಮ್ಮೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯಿಂದ ನೀರು ಬರುತ್ತದೆ ಎಂದು ತಿಳಿಸಿರುತ್ತಾರೆ.

ಅದರಂತೆ ಅಧ್ಯಕ್ಷರು, ಎಇ ನವೀನ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ.) ರವರಿಗೆ ಇದಕ್ಕೆ ಸಂಬಂಧಿಸಿದಂತೆ ವಿವರಿಸಲು ಸೂಚಿಸಿರುತ್ತಾರೆ. ಎಇ ನವೀನ್ ರವರು ಮುಂದಿನ 15 ದಿನಗಳಲ್ಲಿ ಸರಿಪಡಿಸುತ್ತೇನೆ ಹಾಗೂ ವಾರಕ್ಕೆ 2 ಬಾರಿ ನೀರು ಬಿಡಲು ಅಧ್ಯಕ್ಷರಿಗೆ ರವರು ತಿಳಿಸಿರುತ್ತಾರೆ.
ಅನಧಿಕೃತ ನೀರಿನ ಸಂಪರ್ಕ ಬಗ್ಗೆ ಚರ್ಚಿಸಲಾಗಿ. ಎಇ ನವೀನ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ.) ರವರಿಗೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸಲು ಸೂಚಿಸಲಾಗಿ ವಾರ್ಡ್ ವ್ಯಾಪ್ತಿಯಲ್ಲಿನ ಬ್ಲಾಕ್ ಸ್ಪಾಟ್‌ಗಳನ್ನು ನಿರ್ಮೂಲನೆ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ವಾರಣಾಸಿಯ ಮಾರಗೊಂಡನಹಳ್ಳಿ ಮುಖ್ಯ ರಸ್ತೆ ಬದಿಯಲ್ಲಿ ಕಸ ಸುರಿಯುತ್ತಿರುವುದರಿಂದ ಅಧ್ಯಕ್ಷರು ರಾತ್ರಿ ಪಾಳಿಯಲ್ಲಿ ಸೀನಿಯರ್, ಜೂನಿಯರ್, ಮಾರ್ಷಲ್ ರವರು ಸೂಪರ್‌ವೈಸರ್ ಮೇಸ್ತ್ರಿಗಳೊಂದಿಗೆ ರಾತ್ರಿ ಪಾಳಿ ನಿರ್ವಹಿಸಿ ಕಸಹಾಕುವವರಿಗೆ ದಂಡ ವಿಧಿಸಿ ಶುಚಿಗೊಳಿಸಲು ಸೂಚಿಸಿರುತ್ತಾರೆ

ಬೀದಿ ದೀಪಗಳಗೆ ಸಂಬಂಧಿಸಿದಂತೆ ಬೀದಿ ದೀಪಗಳ ನಿರ್ವಹಣೆ ಬಗ್ಗೆ ಆರ್.ಡಬ್ಲ್ಯೂ.ಎ. ಮಂಜುನಾಥರವರು ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಆರ್.ಡಬ್ಲ್ಯೂ.ಎ. ಬಾಲರಾಜು ರವರು ಬೆಳತ್ತೂರು ಕೀರ್ತಿ ಅಪಾರ್ಟ್‌ಮೆಂಟ್ ಹಿಂಭಾಗ ರಸ್ತೆ ಬೀದಿ ದೀಪಗಳನ್ನು ಸರಿಮಾಡಲು ಸೂಚಿಸಿದರೂ ಸಹ ಸರಿಯಾಗಿ ಮಾಡುತ್ತಿಲ್ಲವೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು ಹಾಜರಿದ್ದ ಬೀದಿ ದೀಪಗಳ ನಿರ್ವಹಣೆ ಮಾಡುತ್ತಿರುವ ಶಿವರಾಜ್ ರವರಿಗೆ ಈ ಮೇಲೆ ತಿಳಿಸಿರುವ ದೂರುಗಳನ್ನು ತಕ್ಷಣ ಸರಿಪಡಿಸುವಂತೆ ಸೂಚಿಸಿರುತ್ತಾರೆ.

ಮಂಜುನಾಥ ರವರು ಬೀದಿ ದೀಪಗಳಿಗೆ ಸ್ವಿಚ್ ಅಳವಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ .

ಶಿವರಾಜ್ ಸೂಪರ್‌ವೈಸರ್ ರವರು ಅಂತಹ ಕಡೆ ಸ್ವಿಚ್ ಬಾಕ್ಸ್‌ಗಳನ್ನು ಅಳವಡಿಸಿ ಕೊಡುತ್ತೇನೆಂದು ತಿಳಿಸಿರುತ್ತಾರೆ ಹಾಗೂ ಟೈಮರ್‌ಗಳ ಬಗ್ಗೆ ತುಂಬಾ ಹಳೆಯದಾಗಿದ್ದು ಅವುಗಳನ್ನು ಬದಲಾಯಿಸಲು ಸಭೆಯಲ್ಲಿ ಸಾರ್ವಜನಿಕರು ತಿಳಿಸಿರುತ್ತಾರೆ.

ಆರ್.ಡಬ್ಲ್ಯೂ.ಎ.ಗಳಾದ ಆರೋಗ್ಯಸ್ವಾಮಿ ರವರು 10 ರಿಂದ 15 ಬಲ್ಬ್‌ಗಳು ಕಂಬದಲ್ಲಿ ಸರಿಯಾಗಿ ಉರಿಯುವುದಿಲ್ಲ ಎಂದು ತಿಳಿಸಿರುತ್ತಾರೆ.

ಅಧ್ಯಕ್ಷರು ಒಂದು ಕಡೆ ಹೊದಮೇಲೆ ಬಂದಿರುವ ಎಲ್ಲಾ ದೂರುಗಳನ್ನು ಸರಿಪಡಿಸಿ ಆ ಪ್ರದೇಶದಿಂದ ಬೇರೆ ಕಡೆ ಹೋಗಬೇಕೆಂದು ತಿಳಿಸಿರುತ್ತಾರೆ. ಕೆಲಸ ಮಾಡುವವರಿಗೆ ಸರಿಯಾಗಿ ಮಾಡಬೇಕೆಂದು ಸೂಚಿಸಿರುತ್ತಾರೆ. ಬಾಲರಾಜ್ ರವರು ದೂರಿಗೆ ಸಂಬಂಧಿಸಿದಂತೆ ಶಿವರಾಜ್ ರವರು ಹೊಸ ಬೀದಿ ದೀಪವನ್ನು ಬುಧುವಾರದ ಒಳಗೆ ಹಾಕಿಕೊಡುತ್ತೇನೆಂದು ತಿಳಿಸಿರುತ್ತಾರೆ.

ಆರೋಗ್ಯಸ್ವಾಮಿ ರವರು ತಮ್ಮ ಸುತ್ತಮುತ್ತ ಪ್ರದೇಶಗಳ ದೂರುಗಳು ಇದ್ದು ಇವುಗಳನ್ನು ಕಂಟ್ರ್ಯಾಕ್ಟರ್ ಪ್ರತಿನಿಧಿಯಾಗಿ ಬಂದಿರುವ ಶಿವರಾಜ್ ರವರಿಗೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ವರದಿ ಮಾಡಲು ಅಧ್ಯಕ್ಷರು ಸೂಚಿಸಿರುತ್ತಾರೆ.

ಎಲ್‌ಇಡಿ ಮತ್ತು ಸಿಸಿ ಟಿವಿ ಅಳವಡಿಸುವ ಬಗ್ಗೆ ಆರೋಗ್ಯ ಸ್ವಾಮಿ ರವರು ಪ್ರಸ್ತಾಪಿಸಿದ್ದು ಇದರ ಬಗ್ಗೆ ಪರಿಶೀಲಿಸಿ ಅಂದರೆ ಮಾಹಿತಿಯನ್ನು ಇಇ ಎಲೆಕ್ಟ್ರೀಕಲ್ ಜಿಬಿಎಂಪಿ ಮಹದೇವಪುರ ಬೀದಿ ದೀಪ

ನಿರ್ವಹಣೆ ಅವರ ಹತ್ತಿರ ಮಾಹಿತಿ ಪಡೆದು. ಆದರೆ ಇದು ಟೆಂಡರ್ ಪ್ರಕ್ರಿಯೆ ಮೂಲಕ ಅಳವಡಿಸ ಬೇಕೆಂದು ಶಿವರಾಜ್ ರವರು ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

ಬೆಸ್ಕಾಂಗೆ ಸಂಬಂಧಿಸಿದಂತೆ ಮಂಜುನಾಥ ರವರು ಮನೆಗಳಿಗೆ ಕನೆಕ್ಷನ್ ಪಡೆದಿರುವವರು ಅತಿ ಕೆಳಗೆ ನೇತು ಬಿಟ್ಟಿರುತ್ತವೆ. ಸಂಪಂಗಿರಾಮಯ್ಯ ಜೆ.ಇ ಬೆಸ್ಕಾಂ ರವರು ಹಾಜರಿದ್ದು. ಕೆಲವು ಸಣ್ಣ ಮನೆಗಳು ಕನೆಕ್ಷನ್ ಪಡೆಯುವ ಸಂದರ್ಭದಲ್ಲಿ ಕೆಳಗಡೆ ನೇತು ಬಿಟ್ಟಿರುದರಿಂದ ಅಪಗಡಗಳು ಸಂಬಂಧಿಸುಪ್ರದು ಹೆಚ್ಚಾಗಿರುವುದರಿಂದ ಇದರ ಬಗ್ಗೆ ಜೆಇ ಸಂಪಂಗಿರಾಮಯ್ಯ ರವರಿಗೆ ಇದರ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ವಹಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.

ಆರ್.ಡಬ್ಲ್ಯೂ.ಎ. ಆರೋಗ್ಯಸ್ವಾಮಿ ರವರು ಬೀದಿ ದೀಪಗಳ ಕಂಬಗಳು ದುರಸ್ಥಿಯಲ್ಲಿದ್ದು ಅದನ್ನು ಸರಿಪಡಿಸುವಂತೆ ಕೊರಿರುತ್ತಾರೆ ಅಧ್ಯಕ್ಷರು ಎಇ ಬೆಸ್ಕಾಂ ರವರಿಗೆ ಸರಿಪಡಿಸಲು ಸೂಚಿಸಲಾಗಿದೆ ಬೆಸ್ಕಾಂ ಕಡೆಯಿಂದ ಮರಗಳ ಕೊಂಬೆಗಳನ್ನು ಕಡಿದು ಡ್ರೈನ್‌ಗಳಿಗೆ ಹಾಗೂ ರಸ್ತೆಗಳಿಗೆ ಬೀಸಾಡುವುದನ್ನು ತಡೆಗಟ್ಟಲು ಎಇ ಸಂಪಂಗಿರಾಮಯ್ಯ ರವರಿಗೆ ಅಧ್ಯಕ್ಷರಿಗೆ ಸೂಚಿಸಿರುತ್ತಾರೆ.

ಆರೋಗ್ಯಸ್ವಾಮಿಯವರು ಚಿಕ್ಕ ಭೈರತಿಯಲ್ಲಿ ಹೊಸದಾಗಿ ಸುಮಾರು 30 ಮೀಟರ್ ರಾಜಕಾಲುವೆಯನ್ನು (ಕಂಕ್ರೀಟ್ ವಾಲ್) ಮಾಡಿಸಿಕೊಡಲು ಸಭೆಯಲ್ಲಿ ಕೋರಲಾಗಿದ್ದು ಇದರ ಬಗ್ಗೆ ರಾಘವೆಂದ್ರ ಎಇ ರಾಜಕಾಲುವೆ ಹಾಗೂ ವಾರ್ಡ್ ಎಇ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಮಂಜುನಾಥ್ ರವರು ಓಂ ಶಕ್ತಿ ಲೇಔಟ್‌ನಲ್ಲಿನ ಎಸ್.ಡಬ್ಲ್ಯೂ.ಎಂ ಗೆ ದೂರು ನೀಡಿದ್ದು ಇದರ ಬಗ್ಗೆ ಎಇ ರಾಘವೇಂದ್ರ ರವರು ರಾಜಕಾಲುವೆಯು ಕೆ.ಆರ್. ಪುರಂಗೆ ಒಳಪಟ್ಟಿರುತ್ತದೆ ಎಂದು ತಿಳಿಸಿರುತ್ತಾರೆ.

ಕಾವೇರಿ ನಗರದಿಂದ್ದ ಬರುವ ನೀರು ಹೂವಿನ ತೋಟದ ಒಳಗೆ ನುಗ್ಗುವ ಬಗ್ಗೆ ಚರ್ಚಿಸಲಾಗಿದು ಇದಕ್ಕೆ ಸಂಬಧಿಸಿದಂತೆ ಎಇ ರಾಜಕಾಲುವೆ ಒತ್ತುವರಿ ಬಗ್ಗೆ ತಿಳಿಸಿರುತ್ತಾರೆ ಹಾಗೂ ಈಗಾಗಲೇ ರಾಜಕಾಲುವೆ ಸರ್ವೆ ಮಾಡಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಆರೋಗ್ಯಸ್ವಾಮಿ ರವರು ಒಂದು ಕಿ.ಲೋ. ರಾಜಕಾಲುವೆ ಕ್ಲೀನ್ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಅಧ್ಯಕ್ಷರ ರಾಘವೆಂದ್ರ ಎಇ ರವರಿಗೆ ರಾಜಕಾಲುವೆ ಡಿ ಶೀಲ್ಟ್ ಮಾಡಿಸಲು ಸೂಚಿಸಿರುತ್ತಾರೆ.

(ಹಿಂಗುಗುಂಡಿಗಳ ಬಗ್ಗೆ) ಬೋರ್‌ವೆಲ್‌ಗಳಲ್ಲಿ ನೀರು ಸಿಗದಿರುವ ಬಗ್ಗೆ. ಹಿಂಗುಗುಂಡಿಗಳನ್ನು ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರದಲ್ಲಿ ಸುಮಾರು 1400 ಹಿಂಗುಗುಂಡಿಗಳನ್ನು ಮಾಡಿರುವ ಪ್ರಯುಕ್ತ ನೀರು ಬತ್ತದಿರಲು ಸಹಾಯವಾಗಿರುತ್ತದೆ. ಈ ಮಾದರಿಯನ್ನು ಮಹದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ಅಳವಡಿಸಬಹುದು ಎಂದು ಶ್ರೀ ಆರೋಗ್ಯಸ್ವಾಮಿರವರು ಸಭೆಯಲ್ಲಿ ಕೋರಲಾಗಿದೆ.

ಕೋವಿಡ್-19 ರ ಬಗ್ಗೆ ಚರ್ಚಿಸಲು ಅಧ್ಯಕ್ಷರು ಸೂಚಿಸಲಾಗಿ ಆರೋಗ್ಯ ಸ್ವಾಮಿ ರವರಿಗೆ ಭೈರತಿ ವ್ಯಾಪ್ತಿಯ ಜನಕ್ಕೆ ಕೋವಿಡ್-19 ಪರೀಕ್ಷೆ ಮಾಡಿಸಲು ತಿಳಿಸಿರುತ್ತಾರೆ.

ಮಂಜುನಾಥರವರು ಆರ್.ಡಬ್ಲ್ಯೂ.ಎ. ರವರು ಮಾರ್ಕೆಟ್‌ಗಳಲ್ಲಿ ಕೋವಿಡ್-19 ಪರೀಕ್ಷೆ ಮಾಡಲು ತಿಳಿಸಿರುತ್ತಾರೆ.

ನಂತರ ವಾರ್ಡ್ ಸಮಿತಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತ್ತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ-54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ